ದುಡಿಯುತ್ತಿದ್ದರು. 'ಆ ನೋವನ್ನು ಯಾವ ಭಾಷೆಯಲ್ಲಿಯೂ ಹಿಡಿದಿಡಲು ಸಾಧ್ಯವಿಲ್ಲ' ಎನ್ನುವ ಬ್ಯಾಪಾರಿ, ತಾನು ಹತ್ತು ವರ್ಷದ ಬಾಲಕನಾಗಿದ್ದಾಗ ಪ್ರತ್ಯಕ್ಷ ಕಂಡ ಅಸಹನೀಯ ಪ್ರಸಂಗಗಳನ್ನು ಚಿತ್ರವತ್ತಾಗಿ ನಿರೂಪಿಸಿ, 'ವಿವರಿಸುವುದು ಸುಲಭ; ಅನುಭವಿಸುವುದು ಕಷ್ಟ' ಎನ್ನುತ್ತಾರೆ. 'ಎಷ್ಟೋ ಸಮಯ ನಾವು ಮಕ್ಕಳು ಬರಿಮೈಯಲ್ಲೇ ತಿರುಗಾಡುತ್ತಿದ್ದೆವು. ನನ್ನ ಚಡ್ಡಿಯ ಹಿಂಭಾಗದ ರಂಧ್ರಗಳನ್ನು ಕೈಯಿಂದ ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೆ. ಅತ್ಯಂತ ದಯನೀಯ ಸ್ಥಿತಿಯೆಂದರೆ ನಮ್ಮಮ್ಮನದ್ದು. ಆಕೆಯ ಸೀರೆ ಹೆಚ್ಚು ಕಡಿಮೆ ಎಲ್ಲೆಡೆ ಹರಿದುಹೋಗಿತ್ತು. ದಾರಿಕಾಣದೆ ಆಕೆ ಹಾಳಾಗಿದ್ದ ಒಂದು ಸೊಳ್ಳೆ ಪರದೆಯನ್ನೇ ಸುತ್ತಿಕೊಳ್ಳತೊಡಗಿದಳು. ಹಗಲು ಹೊತ್ತಿನಲ್ಲಿ ಗುಡಿಸಲಿನಿಂದ ಹೊರಗೆ ಬರುತ್ತಲೇ ಇರಲಿಲ್ಲ' – ಈ ಬಗೆಯ ತಿರಸ್ಕಾರ, ನಿಂದನೆ, ಅವಮಾನಗಳಿಂದ ರೋಸಿಹೋದ ಬ್ಯಾಪಾರಿ ಮನೆ ಬಿಟ್ಟು ಓಡಿಹೋಗಲು ನಿರ್ಧರಿಸಿದರು.

ಹಸಿವು, ಬಡತನ, ನೋವು, ಹಿಂಸೆಗಳನ್ನೇ ಮೈತುಂಬಿಕೊಂಡಿದ್ದ ಬ್ಯಾಪಾರಿ ಕೆಲಸಕ್ಕಾಗಿ ಊರೂರು ಅಲೆಯುವ ಕಥನ ಕರುಳು ಹಿಂಡುತ್ತದೆ. ಅವರು ಮಾಡಿದ ಕೆಲಸಗಳು, ಅನುಭವಿಸಿದ ಸಂಕಷ್ಟಗಳು ಹಲವು: ದನ–ಕುರಿ ಕಾಯುವುದು, ಟೀ ಅಂಗಡಿ ಕೆಲಸ, ರೈಲ್ವೆ ಸ್ಟೇಷನ್‌ಗಳಲ್ಲಿ ಲಗೇಜು ಹೊರುವುದು, ಅಂತಸ್ತಿನ ಕಟ್ಟಡಗಳಿಗೆ ಇಟ್ಟಿಗೆ ಸಾಗಿಸುವುದು, ಮದುವೆ ಮನೆಯ ಅಡುಗೆಯ ಕೆಲಸ, ಸೈಕಲ್ ರಿಕ್ಷಾ ಚಾಲಕ, ಕಟ್ಟಡದ ಕಾವಲುಗಾರ, ಲಾರಿ ಕ್ಲೀನರ್, ರೈಲ್ವೆ ನಿಲ್ದಾಣದ ಪ್ಲಾಟ್ ಫಾರಂನಲ್ಲಿ ಕಸ ಗುಡಿಸುವುದು, ಸ್ಮಶಾನ ಕಾಯುವುದು, ಇತ್ಯಾದಿ. ಪ್ರಾಮಾಣಿಕವಾಗಿ ಇಷ್ಟೆಲ್ಲಾ ಕೆಲಸ ಮಾಡಿದರೂ ಕೊನೆಯಲ್ಲಿ ಬರಿಗೈಯಲ್ಲಿ ಬರಬೇಕಿತ್ತು. ಕಾರಣ, ಜಾತಿನಿಂದನೆ ಮತ್ತು ಕಿರುಕುಳ.

ಹದಿನೈದು ವರ್ಷದ ಬಾಲಕನ ಮೇಲೆ ನಡೆದ ಸಲಿಂಗ ಅತ್ಯಾಚಾರವನ್ನು ಬ್ಯಾಪಾರಿ ಅತೀವ ನೋವಿನಿಂದ ಹೇಳಿಕೊಂಡಿದ್ದಾರೆ. ಈ ಭಾಗವನ್ನು ಓದುವಾಗ ನಿರಾಶ್ರಿತರು/ಸಂತ್ರಸ್ತರ ಮೇಲೆ ನಿರ್ದಯವಾಗಿ ಆಕ್ರಮಣವನ್ನು ಎಸಗುವ ಪೊಲೀಸ್/ ಜೈಲು ಅಧಿಕಾರಿಗಳ ನಿರ್ಲಜ್ಜತನದ ಬಗ್ಗೆ ವಾಕರಿಕೆ ಬರುತ್ತದೆ: 'ಇದು ಕ್ರೂರ ಜಗತ್ತಿಗೆ ಗೊತ್ತಾಗದ ಹಾಗೆ ಸತತವಾಗಿ ನಡೆಯುವ ಕ್ರಿಯೆ. ಪ್ರಾಣಿಗಳನ್ನೂ ಬಿಡುವುದಿಲ್ಲ'. ಪ್ರಯಾಣಿಕರು ಎಸೆದ ಚಪಾತಿಗಾಗಿ ಹಸಿದ ನಾಯಿಗಳ ಜೊತೆ ಸೆಣಸುವ, ಟಿಕೆಟ್ ಇಲ್ಲದೆ ಪ್ರಯಾಣ ಮಾಡಿ ಕಲೆಕ್ಟರ್‌ನಿಂದ ಶಿಕ್ಷೆಗೆ ಒಳಗಾಗುವ ಪ್ರಸಂಗಗಳು ಹಸಿವಿನ ದಾರುಣತೆಯ ಚಿತ್ರಗಳಾಗಿವೆ. ಬಾಲಕ ಬ್ಯಾಪಾರಿಯನ್ನು ಹಲವರು ವಂಚಿಸಿ, ಕೆಲಸ ಮಾಡಿಸಿಕೊಂಡು ಬಿಡಿಗಾಸನ್ನೂ ಕೊಡದೆ ಹೊರದಬ್ಬುತ್ತಾರೆ. ತನ್ನ ಮನೆಯವರಿಗಾಗಿ ಕಷ್ಟಪಟ್ಟು ದುಡಿದಿಟ್ಟುಕೊಂಡಿದ್ದ ಸ್ವಲ್ಪ ಹಣವನ್ನೂ ಕಳವು ಮಾಡುತ್ತಾರೆ. ಇದಿಷ್ಟೂ ಬ್ಯಾಪಾರಿಯ ಅಲೆಮಾರಿ ಕಥನ.

ಐದು ವರ್ಷಗಳ ಕಾಲ ಕುಟುಂಬದ ಸದಸ್ಯರನ್ನು ತೊರೆದು ಹೋಗಿದ್ದ ಬ್ಯಾಪಾರಿ ಮರಳಿ ಜಾಧವಪುರಕ್ಕೆ ಬರುತ್ತಾರೆ; ಅದು 'ನಕ್ಸಲ್‌ಬಾರಿ' ಹೋರಾಟದಿಂದ ಗಮನ ಸೆಳೆದಿದ್ದ ಪ್ರದೇಶ: 'ಎಲ್ಲಿಂದ ಪ್ರಯಾಣ ಆರಂಭಿಸಿದೆನೋ ವಾಪಸು ಅಲ್ಲಿಗೇ ಬಂದಿದ್ದೇನೆ' ಎಂಬ ಪುಳಕ. 'ಓಡಿ ಹೋಗಿದ್ದು ಬರಿಗೈಯಲ್ಲಿ. ಈಗ ವಾಪಸು ಬಂದದ್ದು ಬರಿಗೈಯಲ್ಲಿ'.

ಮದುವೆ ಮನೆಯೊಂದರಲ್ಲಿ ಅಡುಗೆ ಸಹಾಯಕನಾಗಿ ಸೇರಿಕೊಂಡು, ನಾಮಶೂದ್ರನೆಂಬ ಅವಹೇಳನಕ್ಕೆ ಬ್ಯಾಪಾರಿ ಗುರಿಯಾಗುತ್ತಾರೆ. ಆ ಪ್ರಸಂಗ ಬ್ಯಾಪಾರಿಯವರಲ್ಲಿ ಮೇಲ್ವರ್ಗ/ಜಾತಿವಾದಿಗಳ ಬಗ್ಗೆ ಅಧಿಕವಾದ ಸಿಟ್ಟನ್ನು ಮೂಡಿಸುತ್ತದೆ. ಕ್ರೂರ ವ್ಯವಸ್ಥೆ ಹಾಗೂ ಶ್ರೀಮಂತ-ಜಮೀನ್ದಾರರ ಅಟ್ಟಹಾಸದಿಂದ ರೋಸಿಹೋಗಿದ್ದ ಬ್ಯಾಪಾರಿ, ರೌಡಿಗುಂಪು ಸೇರಿ ಬಾಂಬ್ ತಯಾರಿಸುವುದನ್ನು ಕಲಿತರು; ಎಡಪಂಥೀಯ ಉಗ್ರಗಾಮಿ ಎನಿಸಿಕೊಂಡರು. ಅವರಿಗೆ ರೈಲ್ವೆ ನಿಲ್ದಾಣವೇ ಕಾರ್ಯಸ್ಥಾನವಾಯಿತು; ಕುಡಿತ-ಹೊಡೆದಾಟ, ಜೂಜು–ಜಗಳ ನಿತ್ಯದ ಪರಿಪಾಠವಾಯಿತು. ನಕ್ಸಲ್ ಚಳವಳಿಗೆ ಪ್ರವೇಶ ಪಡೆದು ವರ್ಗರಹಿತ ಹಾಗೂ ಶೋಷಣಾಮುಕ್ತ ಸಮಾಜ ನಿರ್ಮಾಣದ ಕಡೆಗೆ ಗಮನ ನೀಡಿದರು.

ವರ್ಧಮಾನ್ ಎಂಬಲ್ಲಿ ಬಾಂಬ್ ಸ್ಫೋಟವಾಗಿ, ಅಪಾಯದಿಂದ ಪಾರಾಗಿ, ಮರುಜೀವ ಪಡೆದು ಬರೈಪುರ ರೈಲ್ವೆ ಸ್ಟೇಷನ್ನಿನ ಕಾಲುವೆ ಸಮೀಪದ ಗುಡಿಸಲಲ್ಲಿ ಇದ್ದಾಗ ಬ್ಯಾಪಾರಿಯವರನ್ನು ಸಂಬಂಧವಿಲ್ಲದ ಗಲಭೆಯೊಂದರಲ್ಲಿ ಸಿಲುಕಿಸಿ